**ದಿನಾಂಕಃ23.02.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.**

**ಪಾಟೀಸವಾಲುಃ ಶ್ರೀ.ಐ.ಪಿ ವಕೀಲರಿಂದ ಎದುರುದಾರರ ಪರವಾಗಿಃ**

ನಾನು ಲಕ್ಕಿ ಟ್ರೇಡರ್ಸ್ ನಲ್ಲಿ ಒಬ್ಬ ಪಾರ್ಟನರ್ ಆಗಿದ್ದೇನೆ. ಅದನ್ನು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ನಾನು ಸದರಿ ಕಂಪನಿಯ ಪ್ರೊಪ್ರೈಟರ್ ಎಂದು ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿ. ಆದ್ದರಿಂದ ದಾಖಲೆಗಳ ಪ್ರಕಾರ ಲಕ್ಕಿ ಟೇಡರ್ಸ್ ಎನ್ನುವುದು ಪಾರ್ಟನರ್ ಶಿಪ್ ಫರ್ಮ್ ಅಥವ ಪ್ರೊಪ್ರೈಟರ್ ಶಿಪ್ ಫರ್ಮ್ ಎನ್ನುವುದನ್ನು ನನಗೆ ಹೇಳಲು ಆಗುವುದಿಲ್ಲ ಎಂದರೆ ಸದರಿ ಕಂಪನಿ ಪಾರ್ಟನರ್ ಶಿಪ್ ಫರ್ಮ್ ಆಗಿರುತ್ತದೆ. ಅದರ ದಾಖಲೆಗಳು ಇದ್ದು, ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಇತರೆ ಪಾರ್ಟನರ್ ಗಳು ನನಗೆ ಸಾಕ್ಷಿ ಹೇಳಲು ಅಧಿಕಾರ ಪತ್ರ ನೀಡಿದ್ದು, ಅದನ್ನು ನಾನು ಹಾಜರುಪಡಿಸಿದ್ದೇನೆ. ನನಗೆ ಯಾವುದೇ ರೀತಿಯ ಅಧಿಕಾರ ಪತ್ರ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

2. ನನಗೆ ಹಿಂದೆ ಇದ್ದ ಅಂಗಡಿಯು ಲಕ್ಕಿ ಟ್ರೇಡರ್ಸ್ ನಂಬರ್ 465/1, ಅವೆನ್ಯೂ ರೋಡ್, ಬೆಂಗಳೂರು-02, ಇಲ್ಲಿ ಇತ್ತು ಎಂದರೆ ಸರಿ. ಸದರಿ ಅಂಗಡಿಯನ್ನು ಯಾವ ದಿನ ಖಾಲಿ ಮಾಡಿಸಲಾಗಿತ್ತು ಎಂದು ನನಗೆ ನೆನಪಿಲ್ಲ. ನಾನು ಈ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಸದರಿ ಅಂಗಡಿ ಸ್ವತ್ತಿನಲ್ಲಿ ಇರಲಿಲ್ಲ ಎಂದರೆ ಸರಿ.

3. ಎಸ್.ಸಿ ಸಂಖ್ಯೆಃ15023/2018 ರಲ್ಲಿ ಸದರಿ ಪ್ರಕರಣದ ಬಗ್ಗೆ ಯಾವ ದಿನಾಂಕದಂದು ನನಗೆ ತಿಳಿಯಿತು ಎಂದರೆ, ಅಮಲ್ಜಾರಿ ಪ್ರಕರಣದಲ್ಲಿ ನನ್ನನ್ನು ಸ್ವತ್ತಿನಿಂದ ಖಾಲಿ ಮಾಡಿಸಿದ ದಿನ ನನಗೆ ತಿಳಿದಿರುತ್ತದೆ. ದಿಃ21.03.2019 ರಲ್ಲಿ ಸದರಿ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಸದರಿ ದಿನ ಎಸ್.ಸಿ ಸಂಖ್ಯೆಃ15023/2018 ಪ್ರಕರಣದಲ್ಲಿ ತೀರ್ಪು ನೀಡಲಾದ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಅಮಲ್ಜಾರಿ ಪ್ರಕರಣದಲ್ಲಿ ನನ್ನನ್ನು ಸ್ವತ್ತಿನಿಂದ ಖಾಲಿ ಮಾಡಿಸಿದ ನಂತರ ನಾನು ಪೋಲೀಸ್ ಠಾಣೆಗೆ ಹೋಗಿ ಅಲ್ಲಿಂದ ಮಾಹಿತಿ ಪಡೆದು ನಂತರ ವಕೀಲರನ್ನು ನೇಮಿಸಿಕೊಂಡಿದ್ದೇನೆ. ಸ್ವತ್ತನ್ನು

ಖಾಲಿ ಮಾಡಿಸಿದ ದಿನ ಮಧ್ಯಾಹ್ನ 2.30 ರ ಸಮಯದಲ್ಲಿ ಠಾಣೆಗೆ ಹೋಗಿ ನಂತರ 4.00 ಗಂಟೆ ಸಮಯದಲ್ಲಿ ವಕೀಲರನ್ನು ಭೇಟಿಯಾಗಿದ್ದೇನೆ. ದಿಃ16.08.2019 ರಂದು ನನ್ನನ್ನು ಸ್ವತ್ತಿನಿಂದ ಖಾಲಿ ಮಾಡಿಸಿದ್ದಾರೆ ಎಂದರೆ ಇರಬಹುದು. ನಂತರ ಅದರ ಮರುದಿನ ದೃಢೀಕೃತ ನಕಲಿಗಾಗಿ ಅರ್ಜಿ ಸಲ್ಲಿಸಿದ್ದೇನೆ. ನಕಲು ಪ್ರತಿಯನ್ನು ಯಾವ ದಿನ ಪಡೆದಿದ್ದಾರೆ ಎಂದು ನನಗೆ ತಿಳಿದಿಲ್ಲ. ವಕೀಲರಿಗೆ ತಿಳಿದಿರುತ್ತದೆ. ಅದರ ನಡುವೆ ಎಷ್ಟು ದಿನಗಳ ಅಂತರವಿದೆ ಎಂದು ನಮ್ಮ ವಕೀಲರಿಗೆ ತಿಳಿದಿದೆ. ಅದರ ಪ್ರತಿ ಸಿಕ್ಕ ತಕ್ಷಣ ನನಗೆ ಬರಲು ಹೇಳಿದ್ದು, ನನಗೆ ದಿನಾಂಕ ನೆನಪಿಲ್ಲ.

4. ಈ ಅರ್ಜಿಯನ್ನು ಅದೇ ವರ್ಷದಲ್ಲಿ ಸಲ್ಲಿಸಿದ್ದು ದಿನಾಂಕ ತಿಳಿದಿಲ್ಲ. ಸ್ವತ್ತನ್ನು ಖಾಲಿ ಮಾಡಿಸುವ ಪೂರ್ವದಲ್ಲಿ ನನಗೆ ಕೋರ್ಟ್ ಅಮೀನರವರ ಮುಖಾಂತರ ನೋಟೀಸ್ ನೀಡಲಾಗಿದೆ ಎಂದರೆ ನನಗೆ ಯಾವುದೇ ನೋಟೀಸ್ ಬಂದಿರುವುದಿಲ್ಲ. ಸದರಿ ಅಮೀನರವರಿಗೆ ನಾನು ನ್ಯಾಯಾಲಯದ ಆದೇಶವನ್ನು ಪಾಲಿಸದಂತೆ ತಡೆಮಾಡಿದ್ದೇನೆ ಎಂದರೆ ಸರಿಯಲ್ಲ. ನಂತರ ಪೋಲೀಸರ ಮುಖಾಂತರ ಸ್ವತ್ತನ್ನು ಖಾಲಿ ಮಾಡಿಸುವಂತೆ ನ್ಯಾಯಾಲಯ ಆದೇಶ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ನಾನು ಓದಿ ನಂತರ ಸಹಿ ಮಾಡಿದ್ದೇನೆ. ಅದರಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇದೆ.

5. ಈ ಪ್ರಕರಣ ಸಲ್ಲಿಸಲು ಯಾವುದೇ ತಡ ಆಗಿರುವುದಿಲ್ಲ. ನಮಗೆ ಮಾಹಿತಿ ಬಂದ ತಕ್ಷಣ ಈ ಪ್ರಕರಣ ಸಲ್ಲಿಸಿದ್ದೇನೆ. ನನಗೆ ದಿಃ23.01.2019 ರ ಆದೇಶದ ಬಗ್ಗೆ ಮಾಹಿತಿ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣವನ್ನು 176 ದಿನಗಳ ತಡವಾಗಿ ಸಲ್ಲಿಸಿದ್ದರ ಬಗ್ಗೆ ಯಾವುದೇ ಸರಿಯಾಗಿ ಕಾರಣವನ್ನು ನಾನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

6. ನಿಪಿಃ2 ರಲ್ಲಿ ನಮೂದಿಸಿರುವ ವಿಳಾಸ ಲಕ್ಕಿ ಟ್ರೇಡರ್ಸ್ 465/1 ಎಂದರೆ ಸರಿ. ಸದರಿ ವಿಳಾಸವನ್ನು ನಮೂದಿಸಿ ನನ್ನ ಹೆಸರು ಸೂಚಿಸಿ ಪತ್ರ ಬರೆದರೆ, ಸದರಿ ಪತ್ರಗಳು ನಮಗೆ ತಲುಪುತ್ತದೆ ಎಂದರೆ ಸರಿ. ನಿಪಿಃ4 ರಲ್ಲಿ ಸಹ ಅದೇ ವಿಳಾಸ ಸೂಚಿಸಲಾಗಿದೆ ಎಂದರೆ ಸರಿ.

ನಿಪಿ:4 ರಲ್ಲಿ ಸ್ವತ್ತಿನ ಶೆಡ್ಯೂಲ್ ಸರಿಯಾಗಿ ನಮೂದಿಸಿದ್ದಾರೆ. ನಿಪಿ:4 ರಲ್ಲಿ ಮಹಜರ್ ಕೂಡ ಇದ್ದು, ಅದನ್ನು ನಾನು ಈ ದಿನಕ್ಕಿಂತ ಪೂರ್ವದಲ್ಲಿ ನೋಡಿರುವುದಿಲ್ಲ. ಅದನ್ನು ನಾನು ಹಾಜರುಪಡಿಸಿಲ್ಲ.

7. ನಾನು ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ 176 ದಿನಗಳ ನಂತರ ಸುಳ್ಳು ಅರ್ಜಿಯನ್ನು ಎದುರುದಾರರ ವಿರುದ್ಧ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಮತ್ತು ಈ ದಿನ ನಾನು ನೀಡುತ್ತಿರುವ ಸಾಕ್ಷಿ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು,
ಲಘು ವ್ಯವಹಾರಗಳ ನ್ಯಾಯಾಲಯ,
24 ನೇ ಎಸಿಎಂಎಂ ಮತ್ತು ಸದಸ್ಯರು ಎಂಎಸಿಟಿ.